<u>ದಿಃ 12-03-2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಂದುವರಿದ ಪಾಟೀ ಸವಾಲು :</u> 2 ನೇ ಎದ್ರುದಾರ ಪರ ವಕೀಲರಾದ ಶ್ರೀ ಎನ್ ಪಿ ಎನ್ ರವರಿಂದ**

ನಾನು ಖರೀದಿ ಮಾಡಿದ ರೋಯಲ್ ಎನ್‌ಫೀಲ್ಡ್ ಮೋಟಾರ್ ಸೈಕಲಿನ ಸಂಖ್ಯೆ ಕೆಎ-20-ಇಜಿ-1523 ಎಂದರೆ ಸರಿ. ಸದ್ರಿ ವಾಹನ ಯಾರ ಹೆಸರಿಗೆ ವರ್ಗಾವಣೆ ಆಗಿದೆ ಎಂದು ನನಗೆ ಗೊತ್ತಿಲ್ಲ. ಸದ್ರಿ ವಾಹನ ವರ್ಗಾವಣೆ ಯಾವ ವರ್ಷ ಮತ್ತು ಯಾವ ತಿಂಗಳು ಆಗಿದೆ ಅಂತ ನನಗೆ ಹೇಳಲಿಕ್ಕೆ ಆಗುವುದಿಲ್ಲ. ನನಗೆ ಅಪಘಾತ ಆದ ಎಷ್ಟು ದಿನದ ನಂತರ ಪೋಲೀಸರಿಗೆ ಅಪಘಾತದ ಮಾಹಿತಿ ಹೋಗಿದೆ ಅಂತ ನನಗೆ ನೆನಪಿಲ್ಲ. ಫಿರ್ಯಾದಿಯನ್ನು ನನ್ನ ಸಂಬಂಧಿ ಸುಬ್ರಹ್ಮಣ್ಯ ರವರು ನೀಡಿದ್ದಾರೆ ಅವರು ಯಾವ ದಿನಾಂಕದಂದು ನೀಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸದ್ರಿ ಸುಬ್ರಹ್ಮಣ್ಯ ರವರನ್ನು ದೋಷಾರೋಪಣಾ ಪಟ್ಟಿಯಲ್ಲಿ ಪೋಲೀಸರು ಸಾಕ್ಷಿಯಾಗಿ ಕಾಣಿಸಿದ್ದಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ.

ಅಪಘಾತದ ನಂತರ ನನ್ನ ಸಂಪೂರ್ಣ ಚಿಕಿತ್ಸೆ ಮಣಿಪಾಲ ಆಸ್ಪತ್ರೆಯಲ್ಲಿ ಆಗಿರುತ್ತದೆ. ಆ ಸಮಯದಲ್ಲಿ ನನ್ನ ತಾಯಿ ಮತ್ತು ಸಹೋದರಿ ನನ್ನ ಜೊತೆಗೆ ಇದ್ದರು. ಅಪಘಾತ ಹೇಗೆ ಆಯಿತು ಅಂತ ವೈದ್ಯರಿಗೆ ಯಾರು ಮಾಹಿತಿ ನೀಡಿದ್ದಾರೆ ಎನ್ನುವ ಬಗ್ಗೆ ನಾನು ತಿಳಿದುಕೊಂಡಿಲ್ಲ. ಸಾಕ್ಷಿಗೆ ಅವರ ವೈದ್ಯಕೀಯ ಕಡತ ತೋರಿಸಿದ್ದು ಅದನ್ನು ಸಾಕ್ಷಿ ಒಪ್ಪಿದ್ದು ಸದ್ರಿ ವೈದ್ಯಕೀಯ ಕಡತವನ್ನು <u>ನಿಆರ್-1</u> ಎಂದು ಗುರುತಿಸಲಾಯಿತು. ಸದ್ರಿ ದಾಖಲಾತಿ ಪ್ರಕಾರ Skid and falls on the motor cycle ಅಂತ ನಮೂದಾಗಿದೆ ಎಂದರೆ ಸರಿ. ಮತ್ತು ಸದ್ರಿ ದಾಖಲಾತಿಯಲ್ಲಿ ನನ್ನನ್ನು ಚಿಕಿತ್ಸೆಗೆ ಕರೆದುಕೊಂಡು ಬಂದ ವ್ಯಕ್ತಿ ಸುಬ್ರಹ್ಮಣ್ಯ ಅಂತ ಕಾಣಿಸಿದ್ದಾರೆ ಎಂದರೆ ಸರಿ. ಅವರು ವೈದ್ಯರಿಗೆ ಅಪಘಾತ ಮೋಟಾರು ಸೈಕಲು ಸ್ಕಿಡ್ ಆಗಿ ಬಿದ್ದಿದ್ದರಿಂದ ಆಗಿರುತ್ತದೆ ಅಂತ ಮಾಹಿತಿ ನೀಡಿದ ಬಗ್ಗೆ ಸದ್ರಿ ವೈದ್ಯಕೀಯ ಕಡತದಲ್ಲಿ ಕಂಡು ಬರುತ್ತದೆ ಎಂದರೆ ಸರಿ.

ಸದ್ರಿ ವೈದ್ಯಕೀಯ ಕಡತದಲ್ಲಿ ನಾನು ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಾದ ಸಮಯದಲ್ಲಿ ಪ್ರಜ್ಞಾವಸ್ಥೆಯಲ್ಲಿದ್ದೆ ಅಂತ ಕಾಣಿಸಲಾಗಿದೆ ಎಂದರೆ ಸಾಕ್ಷಿ ಅದರಲ್ಲಿ ಬರೆದಿದ್ದು ಹೌದು ಆದರೆ ಅದನ್ನು ತಪ್ಪಾಗಿ ಕಾಣಿಸಲಾಗಿದ್ದು ನನಗೆ ಪ್ರಜ್ಞೆ ಇರಲಿಲ್ಲ ಅಂತ ನುಡಿಯುತ್ತಾರೆ. ಸದ್ರಿ ಘಟನೆಗೆ ಸಂಬಂಧಪಟ್ಟಂತೆ ಪತ್ರಿಕಾ ವರದಿ ಆದ ಬಗ್ಗೆ ನನಗೆ ಗೊತ್ತಿಲ್ಲ. ದಿಃ06-11-2018 ರಂದು ದಿ ಮ್ಯಾಂಗಲೂರಿಯಂ ಡಾಟ್ ಕಾಂ ಮತ್ತು ದೈಜಿ ವರ್ಡ ಪತ್ರಿಕೆಗಳಲ್ಲಿ ನಾನು ಮೋಟಾರು ಸೈಕಲಿನಲ್ಲಿ ಸ್ಕಿಡ್ ಆಗಿ ಬಿದ್ದು ಪ್ರಕಟವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಪೋಲೀಸು ದಾಖಲಾತಿಯಲ್ಲಿ ಕಾಣಿಸಿದಂತೆ ನಾನು ಪ್ರಯಾಣ ಮಾಡುತ್ತಿದ್ದ ಮೋಟಾರು ಸೈಕಲನ್ನು ಪೋಲೀಸರು ಯಾವಾಗ ವಶಕ್ಕೆ ಪಡೆದುಕೊಳ್ಳಲಾಯಿತು ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-3 ಸ್ಥಳ ಮಹಜರು ಪ್ರಕಾರ ನಾನು ಪ್ರಯಾಣ ಮಾಡುತ್ತಿದ್ದೆ ಅಂತ ಹೇಳುವ ಮೋಟಾರು ಸೈಕಲು ಅಮಾನತುಪಡಿಸಿಕೊಂಡಿದ್ದು ಕಂಡು ಬರುತ್ತದೆ ಎಂದರೆ ಇರಬಹುದು. ದಿಃ14-11-2018 ರಂದು ಸದ್ರಿ ವಾಹನವನ್ನು ಶಂಕರನಾರಾಯಣ ಪೋಲೀಸು ಠಾಣಾ ಆವರಣದಲ್ಲಿ ನಿಪಿ-6 ರಂತೆ ಆರ್ ಟಿ ಓ ತಪಾಸಣೆ ಮಾಡಲಾಗಿತ್ತು ಎಂದರೆ ಇರಬಹುದು ನನಗೆ ಗೊತ್ತಿಲ್ಲ. ಸಾಕ್ಷಿಗೆ ದಿಃ13-11-2018 ರಲ್ಲಿ ಮೋಟಾರು ಸೈಕಲು ಸಂಖ್ಯೆ ಕೆಎ-20-ಇಜೆ-6408 ಇದನ್ನು ವಾಯು ಮಾಲಿನ್ಯ ತಪಾಸಣೆ ಮಾಡಲಾಗಿತ್ತು ಅಂತ ದಾಖಲಾತಿ ಕೊಟ್ಟಿದ್ದು ಅದನ್ನು ಸಾಕ್ಷಿ ಒಪ್ಪಿದ್ದು, ಸದ್ರಿ ದಾಖಲಾತಿಯನ್ನು **ನಿಆರ್-2** ಎಂದು ಗುರುತಿಸಲಾಯಿತು. ನಿಪಿ-2 ಫಿರ್ಯಾದಿ ವಸ್ತುಸ್ಥಿತಿಯ ನೈಜ ಘಟನೆಗೆ ಸಂಬಂಧಪಟ್ಟ ಫಿರ್ಯಾದಿ ಆಗಿರುವುದಿಲ್ಲ ಎಂದರೆ ಸರಿ ಅಲ್ಲಾ. ನಾನು ಪೋಲೀಸರು ಮತ್ತು 1 ನೇ ಎದುರುದಾರರ ಜೊತೆ ಶ್ಯಾಮೀಲಾಗಿ ಪರಿಹಾರ ಪಡೆಯುವ ಉದ್ದೇಶದಿಂದ ನಿಪಿ-1 ರಿಂದ ನಿಪಿ-7 ದಾಖಲಾತಿಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿ ಅಲ್ಲಾ. ನಾನು ಹೇಳಿದಂತೆ ವಾಹನ ಸಂಖ್ಯೆ ಕೆಎ-20-ಇಜೆ-6408 ಇದು ಯಾವುದೇ ಅಪಘಾತದಲ್ಲಿ ಒಳಪಡದೇ ಇದ್ದ ಕಾರಣ ನಾನು

ಈ ಪ್ರಕರಣದಲ್ಲಿ 2ನೇ ಎದುರುದಾರರಿಂದ ಯಾವುದೇ ಪರಿಹಾರ ಪಡೆಯಲು ಅರ್ಹನಾಗಿಲ್ಲ ಎಂದರೆ ಸರಿ ಅಲ್ಲಾ.

ನಾನು ಇವತ್ತಿನವರೆಗೆ ಇನ್ ಕಂ ಟ್ಯಾಕ್ಸ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಅಪಘಾತ ಆದ ನಂತರ ನನ್ನ ವೇತನದ ಬಗ್ಗೆ ದಾಖಲೆ ಇದೆ. ಈಗ ನನಗೆ ರೂಃ65,000-00 ಸಂಬಳ ಇದೆ. ನನಗೆ ಅಪಘಾತದಿಂದ ಆದಾಯ ನಷ್ಟ ಆಗಿದೆ ಎನ್ನುವ ಬಗ್ಗೆ ಮತ್ತು ನಾನು ನನ್ನ ಕರ್ತವ್ಯಕ್ಕೆ ಗೈರು ಹಾಜರಿದ್ದು ಗಳಿಕೆ ರಜೆ ಪಡೆದುಕೊಂಡ ಬಗ್ಗೆ ದಾಖಲಾತಿ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲಾ ಮತ್ತು ನಮ್ಮ ಇಲಾಖೆಯ ಅಧಿಕಾರಿಯವರನ್ನು ಆ ಸಂಬಂಧವಾಗಿ ಸಾಕ್ಷ್ಯ ಮಾಡಿಸಲು ಯಾವುದೇ ತೊಂದರೆ ಇಲ್ಲಾ. 2020 - 2021ನೇ ಸಾಲಿನಲ್ಲಿ ಕೋವಿಡ್ ನಿಬಂಧನೆಗಳು ಇದ್ದಿದ್ದರಿಂದ ಯಾವುದೇ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಪಂದ್ಯಾವಳಿ ಆಗಿಲ್ಲ ಎಂದರೆ ಸಾಕ್ಷಿ 2021ರಲ್ಲಿ ಪಂದ್ಯಾವಳಿ ನಡೆದಿದೆ ಅಂತ ನುಡಿಯುತ್ತಾರೆ. ವೈದ್ಯರು 1 ವರ್ಷದವರೆಗೆ ಆಟ ಆಡಲು ತೊಂದರೆ ಆಗುತ್ತದೆ ಅಂತ ನನಗೆ ತಿಳಿಸಿದ್ದರು. ನಾನು ವಿದೇಶದಲ್ಲಿ ಯಾವುದೇ ಕ್ಲಬ್‌ನ ಪರವಾಗಿ ವಾಲಿಬಾಲ್ ಆಟ ಆಡಿದ ಬಗ್ಗೆ ಯಾವುದೇ ದಾಖಲಾತಿ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ಪಂದ್ಯಾವಳಿಗೆ ಆಯ್ಕೆ ಆದ ಬಗ್ಗೆ ಸಿಡಿ ಮುಖಾಂತರ ಹಾಜರುಪಡಿಸಿದ್ದೇನೆಂದು ನಾನು ಮುಖ್ಯ ವಿಚಾರಣೆಯಲ್ಲಿ ನುಡಿದಿದ್ದೇನೆ ಆ ರೀತಿ ನಾನು ಯಾವುದೇ ಸಿಡಿ ಹಾಜರುಪಡಿಸಿಲ್ಲ ಎಂದರೆ ಸರಿ ಅಲ್ಲಾ. ನನ್ನ ಮುಖ್ಯ ವಿಚಾರಣೆಯ ಪ್ಯಾರಾ 8ರಲ್ಲಿ ಕಾಣಿಸಿದ ವಿಷಯಗಳು ಸುಳ್ಳಾಗಿರುತ್ತದೆ ಎಂದರೆ ಸರಿ ಅಲ್ಲಾ. ಅಪಘಾತ ನನ್ನ ತಪ್ಪಿಂದಲೇ ನಾನೇ ಬಿದ್ದು ಮಾಡಿಕೊಂಡಿದ್ದರಿಂದ ಅದರ ನಷ್ಟ ನಾನೇ ಭರಿಸಬೇಕಾಗಿದ್ದು 2ನೇ ಎದುರುದಾರರು ಸದ್ರಿ ಅಪಘಾತಕ್ಕೆ ಯಾವುದೇ ಪರಿಹಾರ ಕೊಡಲು ಬಾಧ್ಯಸ್ಥರಾಗಿರುವುದಿಲ್ಲ ಎಂದರೆ ಸರಿ ಅಲ್ಲಾ.

**<u>ಮರು ವಿಚಾರಣೆಃ</u>** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**